2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ**115/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ರಾಘವೇಂದ್ರ | ಪಿಡಬ್ಲ್ಯೂ - 3 |
| ತಂದೆಯ ಹೆಸರು | - | ಗೋಪಾಲಚಾರಿ | ಸಿಡಬ್ಲ್ಯೂ - 4 |
| ವಯಸ್ಸು | - | 47 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ ಸ್ಥಳ | - | ಕೋಟೆ, ಚಿಕ್ಕಮಗಳೂರು | |

ದಿನಾಂಕಃ 16-01-2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ನನಗೆ ಪಿರ್ಯಾದಿ ಕಾವ್ಯಶ್ರೀ ಇವರು ಗೊತ್ತು. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯ ಇರುವುದಿಲ್ಲ. ಆದರೆ ಮದುವೆ ಪತ್ರಿಕೆಯಲ್ಲಿ 1 ನೇ ಆರೋಪಿಯ ಭಾವಚಿತ್ರವನ್ನು ನೋಡಿರುತ್ತೇನೆ ದಿಃ 05.10.2017 ರಂದು ಸಂಜೆ 5 ಗಂಟೆಗೆ ನನ್ನನ್ನು ಮತ್ತು ಧರ್ಮೇಗೌಡ ಎಂಬುವವರನ್ನು ಚಿಕ್ಕಮಗಳೂರಿನ ಟೌನ್ ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿಗೆ ಕರೆಸಿದ್ದರು. ಆರೋಪಿಗಳ ಮತ್ತು ಪಿರ್ಯಾದಿ ಕಾವ್ಯಶ್ರೀ ಇವರ ನಡುವೆ ಗಲಾಟೆಯಾದಹಿನ್ನೆಲೆಯಲ್ಲಿ ಮಹಜರ್ ಗೆ ನನ್ನನ್ನು ಮತ್ತು ಧರ್ಮೇಗೌಡ ಇವರನ್ನು ಪಂಚರಾಗಲು ಕರೆಸಿದ್ದರು. ಆ ಸಮಯದಲ್ಲಿ ಪಿರ್ಯಾದಿ ಕಾವ್ಯಶ್ರೀ ಇವರು ತಮ್ಮ ಮದುವೆಯ ಪತ್ರಿಕೆ, ಮದುವೆಯ ಪೋಟೋಗಳು ಮತ್ತು ಅವರ ಕೈ ಮತ್ತು ಕಾಲುಗಳು, ಮತ್ತು ಅವರ ಕುತ್ತಿಗೆಗೆ ಗಾಯವಾಗಿರುವ

ಪೋಟೋಗಳನ್ನು ಪೊಲೀಸರಿಗೆ ಹಾಜರು ಪಡಿಸಿರುತ್ತಾರೆ. ಅವುಗಳನ್ನು ಪೊಲೀಸರು ನಮ್ಮ ಸಮಕ್ಷಮ ಮಹಜರ್ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದರಿ ಅಮಾನತ್ತು ಮಹಜರ್ ನ್ನು ಈಗಾಗಲೇ ನಿ.ಪಿ.5 ಎಂದು ಗುರುತಿಲಾಗಿದೆ ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.5(ಬಿ) ಎಂದು ಗುರುತಿಸಲಾಯಿತು. ನಮ್ಮ ಮುಂದೆ ಪಿರ್ಯಾದಿ ಹಾಜರು ಪಡಿಸಿದ ದಾಖಲಾತಿಗಳು ಮತ್ತು ಪೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು 1 ನೇ ಆರೋಪಿಯ ಮತ್ತು ಪಿರ್ಯಾದಿ ಕಾವ್ಯಶ್ರೀಯ ಲಗ್ನ ಪತ್ರಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.6 ಎಂದು ಗುರುತಿಸಲಾಗಿದ್ದು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.6(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ಮದುವೆ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.7 ಎಂದು ಗುರುತಿಸಿದ್ದು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು. ಅದೇ ರೀತಿ 1 ನೇ ಆರೋಪಿಯೊಂದಿಗೆ ಮದುವೆ ಕಾಲಕ್ಕೆ ಕಾವ್ಯಶ್ರೀ ಇರುವ ಪೋಟೋವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.8 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಇನ್ನೊಂದು ಪೋಟೋವನ್ನು ನೋಡಿ ಗುರುತಿಸಿದ್ದು ಅದರಲ್ಲಿ ಪಿರ್ಯಾದಿ ಕಾವ್ಯಶ್ರೀ ಇವರ ಕುತ್ತಿಗೆಗೆ ಆದ ಗಾಯವನ್ನು ತೋರಿಸುತ್ತಿರುವ ಚಿತ್ರಣ ಕಂಡು ಬರುತ್ತದೆ ಅದನ್ನು ನಿ.ಪಿ.9 ಎಂದು ಈಗಾಗಲೇ ಗುರುತಿಸಲಾಗಿದೆ. ಅದೇ ರೀತಿ ಸಾಕ್ಷಿಯು ಇನ್ನು 2 ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳಲ್ಲಿ ಪಿರ್ಯಾದಿ

ಕಾವ್ಯಶ್ರೀ ಇವರ ಕೈ ಮತ್ತು ಕಾಲುಗಳಿಗೆ ಆದ ಗಾಯಗಳ ಚಿತ್ರಣ ಕಂಡು ಬರುತ್ತದೆ. ಅವುಗಳನ್ನು ಈಗಾಗಲೇ ಕ್ರಮವಾಗಿ ನಿಪಿ.10 ಮತ್ತು 11 ಎಂದು ಗುರುತಿಸಲಾಗಿದೆ. ನಿ.ಪಿ.6 ರಿಂದ 11 ಪೋಟೋ ಮತ್ತು ದಾಖಲಾತಿಗಳನ್ನು ನಿ.ಪಿ.5 ರ ಮಹಜರ್ ಮೂಲಕ ಪೊಲೀಸರು ನಮ್ಮ ಸಮಕ್ಷಮ ಅಮಾನತ್ತು ಪಡಿಸಿಕೊಂಡ ದಾಖಲೆಗಳು ಆಗಿರುತ್ತವೆ.

ಪಾಟೀ ಸವಾಲು ಶ್ರೀ ವಿ.ಟಿ.ಟಿ. ವಕೀಲರಿಂದ – ಆರೋಪಿತರ ಪರವಾಗಿ

2. ನಾನು 8 ನೇ ತರಗತಿವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಪೊಲೀಸರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಜರ್ ಗೆ ಪಂಚರಾಗಿ ಬರಲು ನೋಟೀಸ್ ನ್ನು ನೀಡಿದ್ದರು. ಸದರಿ ನೋಟೀಸ್ ನ್ನು ನನಗೆ ಕೋಟೆಯ ನಮ್ಮ ಮನೆಯ ಹತ್ತಿರ ಕೊಟ್ಟಿದ್ದರು. ಸದರಿ ನೋಟೀಸ್ ನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಅದನ್ನು ನಾನು ತಂದಿರುವುದಿಲ್ಲ. ಸದರಿ ನೋಟೀಸ್ ನ್ನು ನನಗೆ ಯಾವ ದಿನಾಂಕದಂದು ನೀಡಿದ್ದರು ಎಂದರೆ ನನಗೆ ಹೇಳಲು ಆಗುವುದಿಲ್ಲ. ನನಗೆ ಪೊಲೀಸರು ಯಾವುದೇ ನೋಟೀಸ್ ನ್ನು ನೀಡಿರುವುದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ರಾಜೇಗೌಡರು ಎಷ್ಟು ವರ್ಷಗಳಿಂದ ಪರಿಚಯ ಎಂದರೆ ಅವರು ನನಗೆ ಪರಿಚಯ ಇರುವುದಿಲ್ಲ. ನಿ.ಪಿ.9, 10, 11 ಪೋಟೋಗಳಲ್ಲಿ ಯಾವ ದಿನಾಂಕ ಮತ್ತು ಸಮಯದದಂದು ಅವುಗಳನ್ನು ತೆಗೆದಿರುತ್ತಾರೆ ಎನ್ನುವ ವಿಷಯ ಅವುಗಳಲ್ಲಿ ನಮೂದಾಗಿಲ್ಲ ಎಂದರೆ ಸರಿ. ನಿ.ಪಿ.9 ರಿಂದ 11 ಪೋಟೋಗಳು ಯಾವ ಘಟನೆಗೆ ಸಂಬಂಧಿಸಿದವು ಎಂಬುದನ್ನು ಪಿರ್ಯಾದಿಯನ್ನು

ಬಿಟ್ಟು ಬೇರೆಯವರಿಂದ ತಿಳಿದುಕೊಂಡಿಲ್ಲ. ಸದರಿ ನಿ.ಪಿ.9 ರಿಂದ 11 ಫೋಟೋಗಳಿಗೂ ಮತ್ತು ನ್ಯಾಯಾಲಯದ ಮುಂದಿರುವ ಆರೋಪಿಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನನಗೆ ಪೊಲೀಸರು ಮಹಜರ್ ಸಂಬಂಧಿಸಿದಂತೆ ಯಾವುದೇ ನೋಟೀಸ್ ನ್ನು ನೀಡಿರುವುದಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ಮಹಜರ್ ನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪಿರ್ಯಾದುದಾರರ ಮಾತು ಕೇಳಿಕೊಂಡು ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ - ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

Sd/-

(ಮಂಜುನಾಥ ಸಂಗ್ರೇಶಿ)

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಮಾ.